ರಾಮು.ಎಲ್. ಒಡ್ಡರ, ಮುದ್ದೇಬಿಹಾಳ
*ತಾರೆಯರು ಹೆಚ್ಚು ವಿವಾದದಲ್ಲಿ ಸಿಲುಕುತ್ತಾರೆ; ಏಕೆ?*



ಏಕೆಂದರೆ ಅವರು ಹೆಚ್ಚು ವಿವಾಹಗಳಲ್ಲಿ ಸಿಲುಕುತ್ತಾರೆ!

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ
*ಏಕಕಾಲಕ್ಕೆ ಮನೆ ಬಾಗಿಲಿಗೆ ಮಂತ್ರಿ, ಮಾತೆ, ಮಿತ್ರ ಬಂದರೆ ಯಾರನ್ನು ಮೊದಲು ಮಾತನಾಡಿಸಬೇಕು?*
ಮಂತ್ರಿಯನ್ನೇ; ಉಳಿದವರು ಮತ್ತೆ ಬಂದಾರು, ಆದರೆ ಮಂತ್ರಿ ಮತ್ತೆ ಬರಲು ಐದು ವರ್ಷಗಳು ಬೇಕು!

ಎಂ.ಬಿ. ಖೋದಾನಪುರ, ಸವದತ್ತಿ
*ಪ್ರೇಮಿಗಳಿಗೆ ಪ್ರೀತಿಸಲು ಯಾರು ಕಲಿಸುತ್ತಾರೆ?*
ಹಾರ್ಟ್ ಆಫ್ ಲವಿಂಗ್ ಆಶ್ರಮದವರು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಗುವ ಗಂಡಸನ್ನು ನಂಬಬಾರದು ಎನ್ನುತ್ತಾರೆ. ಸದಾ ನಗುವ ಮುಖ್ಯಮಂತ್ರಿಯನ್ನು ಹೇಗೆ ನಂಬುವುದು?*



ಅವರು ನಗುತ್ತಿದ್ದಾರೆಂದು ಯಾರು ಹೇಳಿದರು? ಅಳಲಾಗುತ್ತಿಲ್ಲ. ಅಷ್ಟೆ!

ಗಾಯತ್ರಿ, ರಾಜಾಜಿನಗರ
*ಕುರೂಪಿಯಾದರೂ ಸುಂದರ ಹೃದಯ, ಸುಂದರಿಯಾದರೂ ಕುರೂಪಿಯಾದ ಹೃದಯ, ಇವರಿಬ್ಬರಲ್ಲಿ ಯಾರನ್ನು ಆಯ್ಕೆ ಮಾಡುವುದು...?*
ಸುಂದರ ಹೃದಯದ ಕುರೂಪಿಯನ್ನೇ ಬ್ಯೂಟಿ ಪಾರ್ಲರ್ ಹಾಯಿಸಿಕೊಂಡು ಹಾರಿಸಿಕೊಂಡು ಬನ್ನಿ!

ಪಿ.ಜೆ. ರಾಘವೇಂದ್ರ, ಮೈಸೂರು
*ದೀಪದಿಂದ ದೀಪ ಹಚ್ಚುವವನು ಜ್ಞಾನಿ; ಸಿಗರೇಟಿನಿಂದ ಸಿಗರೇಟು ಹಚ್ಚುವವನು?*
ಇಂಟರ್ನಲ್ ಕಂಬಶ್ಚನ್ ಪ್ರಾಣಿ!

ಎಂ. ನಾಗವೈಷ್ಣವಿ, ಹಾಸನ
*ಉತ್ತಿಷ್ಠ ಎಂದು ಸುಪ್ರಭಾತ ಹಾಡುತ್ತಾರಲ್ಲಾ, ಭಗವಂತ ಒಂದು ಕ್ಷಣ ನಿದ್ರಿಸಿದರೆ ಈ ಸೃಷ್ಟಿ ಉಳಿಯಬಲ್ಲದೇ?*
ನಿದ್ರಿಸದಿರಬಹುದು, ತೂಕಡಿಸಬಹುದಲ್ಲಾ... ತೂಕಡಿಕೆಯಿಂದ ಬಡಿದೆಬ್ಬಿಸಲು ಸುಪ್ರಭಾತ!

ಸಂಗೀತ ಜಿ, ಭಾರತೀನಗರ
*ಅಮ್ಮನ ಪ್ರೀತಿ ಬಯಸುವುದು ತಪ್ಪೇ?*
ಅದನ್ನೇಕೆ ಬಯಸಬೇಕು? ಮೊಗೆಮೊಗೆದು ಪ್ರೀತಿಯನ್ನು ಕೊಡುವುದು ತಾಯಿಯ ಕರ್ತವ್ಯ, ಮಗುವಿನ ಹಕ್ಕು!

ಎಂ.ಎಸ್. ಸೋಮಶೇಖರ್, ಮೈಸೂರು
*ಕೈಗೆ ಬರದ ತುತ್ತು ಸೀದಾ ಬಾಯಿಗೆ ಸೇರುವುದೆಂದರೇನು?*
ಸ್ಪೂನ್ ಉಪಯೋಗಿಸಿದರು ಎಂದು!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ಯಾವಾಗಲೂ ನಾವೇ ಏಕೆ ಕೇಳಬೇಕು? ಒಂದೊಮ್ಮೆಯಾದರೂ ನೀವು ಕೇಳಬಾರದೆ?*
ಇದೋ, ಈಗಲೇ, ಈ ಕ್ಷಣವೇ, ಈ ಸಂದರ್ಭದಲ್ಲೇ, ಈ ಸುಮುಹೂರ್ತದಲ್ಲೇ ಕೇಳಿಬಿಡುತ್ತೇನೆ; ನಿಮ್ಮ ಮುಂದಿನ ಪ್ರಶ್ನೆ ಏನು?

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ಒಂದು ವೇಳೆ ಚಲನಚಿತ್ರಗಳೇ ಇಲ್ಲದಿದ್ದರೆ ಏನಾಗುತ್ತಿತ್ತು?*
ಚಿಂಪಾಂಜಿಗಳನ್ನು ಹೀರೋಗಳೆಂದು ಒಪ್ಪಿಕೊಳ್ಳಬೇಕಾದುದು ತಪ್ಪುತ್ತಿತ್ತು!

ಬಿಂಡಿಗನವಲೆ ರಂಗರಾಜು, ಬೆಂಗಳೂರು
*ಅಂದಿನ ದಿನಗಳಲ್ಲಿ ಹೆಣ್ಣಿನ ಅರ್ಧ ಆಯಸ್ಸು ಬಸಿರು, ಬಾಣಂತನಗಳಲ್ಲೇ ಕಳೆದುಹೋಗುತ್ತಿತ್ತು; ಇಂದು?*
ಅರ್ಧ ಆಯಸ್ಸು ಕಳೆದ ನಂತರವೇ ಬಸಿರು, ಬಾಣಂತನ!

ಎಂ.ಆರ್. ಪವನ್‌ಕುಮಾರ್, ಬಳ್ಳಾರಿ
*ಹೆಣ್ಣು ಗಂಡಿನ ಬಾಳಿಗೆ ಜ್ಯೋತಿಯಾದರೆ, ಗಂಡು?*
ಆ ಜ್ಯೋತಿಯೊಡನೆಯೇ ಇದ್ದು ಎಣ್ಣೆ ಹಾಕುವುದು, ಬತ್ತಿ ಹಚ್ಚುವುದು ಇವನೇ!

## ಬಹುಮಾನಿತ ಪ್ರಶ್ನೆ

ಎನ್. ಪ್ರಕಾಶ್, ದೇವನಹಳ್ಳಿ
*ಕೆಲಸ ಮಾಡಿಸಿಕೊಳ್ಳುವಾಗ ಇರುವ ಸರಳತೆ, ಸಜ್ಜನಿಕೆ ಅನಂತರ ಏಕೆ ಇರುವುದಿಲ್ಲ?*
ಥೂ! ಅಂತಹ ನಿಷ್ಠೆ ತೋರಲು ನಾವೇನು ನಾಯಿಗಳೇ?

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು
*ಸತ್ತು ಸತ್ತು ಬದುಕಿದ ಎಂದರೆ...?*
ನರ್ಸಿಂಗ್ ಹೋಂನಲ್ಲಿದ್ದು ಬಂದ ಎಂದರ್ಥ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಗಂಡನ್ನು ಹಿಂದೆ ಹೊಗಳಬೇಕು, ಹೆಣ್ಣನ್ನು ಮುಂದೆ ಹೊಗಳಬೇಕು; ರಾಜಕಾರಣಿಯನ್ನು?*
ಹೊಗಳಲು ಹಿಂದೆ ಮುಂದೆ ನೋಡಬೇಕು.

ರತ್ನ ಅಶೋಕ ಗೊರವರ, ನವಲಗುಂದ
*ಗಾಂಧೀಜಿಯ ತಲೆಯ ಮೇಲೆ ಕಾಗೆ ಏಕೆ ಕೂರಲ್ಲ?*
ನೈಸ್ ಆಗಿರುವುದರಿಂದ ಜಾರಿ ಬೀಳುವ ಭಯ!

ರಾಜು ಎಸ್. ಗಾಲಿ, ಅಥಣಿ
*ಕಸಬ್‌ಗೇಕೆ ಗಲ್ಲು ಇಲ್ಲ?*



ಉಗ್ರರ ಬಗ್ಗೆ ನಮ್ಮದು ಅಹಿಂಸಾ ಧೋರಣೆಯಾದ್ದರಿಂದ!

ಪದ್ಮಾ ಕೃಷ್ಣಮೂರ್ತಿ, ತುಮಕೂರು
*ಕಟಕಟೆಯಲ್ಲಿ ನಿಲ್ಲುವ ಸ್ಥಿತಿ ಬಂದಾಗ ಈ ರಾಜಕಾರಣಿಗಳಿಗೆ ಜ್ವರ ಬಂದುಬಿಡುತ್ತದೆಯಲ್ಲಾ...?*
ಯಾರಿಗೇ ಆದರೂ ಬಹಳ ರೈಡ್ ಮಾಡಿದಾಗ ಜ್ವರ ಬರುವುದು ಸಹಜ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಣ್ಣ, ಫಾಸ್ಟ್ ಫುಡ್‌ಗೂ, ಫಾಸ್ಟ್ ಡ್ರೈವ್‌ಗೂ ಇರುವ ಸಂಬಂಧ?*
ಕೆಟ್ಟ ಜಾಗದಲ್ಲಿ ಫಾಸ್ಟ್‌ಫುಡ್ ತಿಂದರೆ, ಆಂಬುಲೆನ್ಸ್‌ನಲ್ಲಿ ಫಾಸ್ಟ್ ಡ್ರೈವ್!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಆತ್ಮಕ್ಕೆ ಸಾವಿಲ್ಲ ಎಂದಾದ ಮೇಲೆ ಆತ್ಮಹತ್ಯೆ ಹೇಗಾಗುತ್ತೆ?*
ಎಂಗತನ, ಎಂಗಿಬೀಳುವಿಕೆ, ಎಕ್ಕಡಿಯಾಟ, ಎಕ್ಕರತನ, ಎಕ್ಕಸೊಕ್ಕು, ಎಚ್ಚರಗೇಡು, ಎಡಕು, ಎಡರು, ಎಡಬಿಡಂಗಿತನ ಮತ್ತು ಎಡವಟ್ಟು ಎಂಬ ಹತ್ತು ಎ ಗಳನ್ನು ಆತ್ಮಕ್ಕೆ ತಂದುಕೊಳ್ಳುವುದೇ ಆತ್ಮಹತ್ಯೆ!

■ ರಾಮ್